3) ಇಲ್ಲ.

4) ಉದ್ಭವಿಸುವುದಿಲ್ಲ.

ವಕ್ಫ್ ಇಲಾಖೆಯಿಂದ ಬಿಡುಗಡೆಯಾದ ಹಣದ ಬಗ್ಗೆ.

1779. ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಸಾರಿಗೆ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ 1991-92ನೇ ಸಾಲಿನಲ್ಲಿ ವಕ್ಫ್ ಇಲಾಖೆಯ ವತಿಯಿಂದ ಯಾವ ಯಾವ ಜಿಲ್ಲೆಗಳಿಗೆ ಮಸೀದಿ. ಪ್ರಾರ್ಥನಾ ಮಂದಿರ. ಇತ್ಯಾದಿಗಳ ನಿರ್ಮಾಣ ಹಾಗೂ ದುರಸ್ತಿಗಾಗಿ ನೀಡಿರುವ ಹಣವೆಷ್ಟು ;

ಆ) ಗುಲ್ಬರ್ಗ ಜಿಲ್ಲೆಯ ವಿವಿಧ ತಾಲ್ಲೂಕುಗಳ ವಿವಿಧ ಮಸೀದಿಗಳಿಗೆ ನೀಡಿರುವ ಹಣವೆಷ್ಟು ;

ಇ) ಈ ಕೆಲಸಗಳು ಯಾವ ಹಂತದಲ್ಲಿವೆ ಹಾಗೂ ಒಂದು ವೇಳೆ ಪೂರ್ತಿಯಾಗದಿದ್ದರೆ ಅವುಗಳನ್ನು ಪೂರ್ತಿಗೊಳಿಸಲು ಅನುದಾನ ನೀಡುವ ವ್ಯವಸ್ಥೆ ಮಾಡಲಾಗಿದೆಯೆ ;

ಈ) ಮಾಡಿದ್ದರೆ ಅವು ಯಾವ ಯಾವ ಮಸೀದಿಗಳು ?

ಶ್ರೀ ಅಜೀಜ್ ಸೇಠ್ (ಸಾರಿಗೆ ಮತ್ತು ವಕ್ಫ್ ಸಚಿವರು) :

ಅ) ನಿರ್ಮಾಣಕ್ಕೆ ಧನ ಸಹಾಯವಾಗಿ ರೂ. 4.40.000-00ನ್ನು ಕೊಟ್ಟಿರುವುದು ಈ ಕೆಳಗಿನಂತಿದೆ :-

1) ಶ್ರೀರಂಗಪಟ್ಟಣದ ಬೊಮ್ಮೂರು ಅಗ್ರಹಾರದ ಸ್ಮಶಾನದ ಕಾಂಪೌಂಡ್ ಗೋಡೆ ಕಟ್ಟಲು ರೂ. 2.50.000-00.

2) ಶ್ರೀರಂಗಪಟ್ಟಣದ ಬೊಮ್ಮೂರು ಅಗ್ರಹಾರದ ಸ್ಮಶಾನದ ಶಮಿಾರ್ ದರ್ಗಾದ ನಿರ್ಮಾಣಕ್ಕಾಗಿ ರೂ. 1.50.000-00.

3) ಮೊಯುದ್ದೀನ್ ಜುಮ್ಮ ಮಸ್ಜಿದ್. ಕಯರ್‌ತಡ್ಕ ಹಳ್ಳಿ. ಕಲಂಜ್ ಪೋಸ್ಟ್. ಬೆಳ್ತಂಗಡಿ ತಾಲ್ಲೂಕು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಸೀದಿ ಕಟ್ಟಲು ರೂ. 40.000-00.

ಆ) ಏನೂ ಇಲ್ಲ.

ಇ) ಏನೂ ಇಲ್ಲ.

ಈ) ಏನೂ ಇಲ್ಲ.